**ಪಿ.ಡಬ್ಲ್ಯೂ** –1

**ದಿನಾಂಕಃ** 10.06.2025 **ರಂದು ಪಿ.ಡಬ್ಲ್ಯೂ** –1 **ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು** 2 **ನೇ ಎದುರುದಾರು ಪರವಾಗಿ ಶ್ರೀ ಎನ್ ಆರ್ ವಕೀಲರಿಂದಃ**

16. ನನ್ನ ತಮ್ಮ ದಿವಾಕರ್ ಅಪಘಾತಕ್ಕೆ ಸಂಬಂಧಪಟ್ಟಂತೆ ದೂರನ್ನು ಕೊಟ್ಟಿದನ್ನು. ಸದರಿಯವರು ಪ್ರತ್ಯಕ್ಷದರ್ಶಿ ಅಲ್ಲ ಎಂದರೆ ಸರಿ. ಸದರಿ ಅಪಘಾತದಲ್ಲಿ ಇರುವ ಪ್ರತ್ಯಕ್ಷದರ್ಶಿಯ ಸಾಕ್ಷ ಮಾಡಿಸಲು ತೊಂದರೆ ಇಲ್ಲ ಎಂದರೆ ಸರಿ. ಲಾರಿಯ ಮುಂದಿನ ಚಕ್ರ ನನ್ನ ಕಾಲಿನ ಮೇಲೆ ಹರಿದಿತ್ತು. ನಾನು ರಸ್ತೆಯ ಎಡಬದಿಯಲ್ಲಿ ಹೋಗುತ್ತಿದ್ದಾಗ ಮುಂದೆ ಇಂದ ಬಂದು ಲಾರಿ ಡಿಕ್ಕಿ ಮಾಡಿತ್ತು. ನಾನೇ ಹೋಗಿ ಲಾರಿಗೆ ಡಿಕ್ಕಿ ಮಾಡಿಕೊಂಡಿದ್ದು ಅಪಘಾತದಲ್ಲಿ ಲಾರಿಯ ನಿರ್ಲಕ್ಷತೆಯಿಂದ ಇಲ್ಲ ಎಂದರೆ ಸರಿಯಲ್ಲ.

17. ಅಪಘಾತದ ಆದ ನಂತರ ನೆಲಮಂಗಲ ಸರ್ಕಾರಿ ಆಸ್ಪತ್ರೆಗೆ ಕರೆದು ಕೊಂಡು ಹೋಗಿದ್ದರು. ಇದಕ್ಕೆ ಸಂಬಂಧಪಟ್ಟಂತೆ ದಾಖಲೆ ಹಾಕಿದ್ದೇವೆ. ಸದರಿ ಆಸ್ಪತ್ರೆಯ ಎಮ್ ಎಲ್ ಸಿ ಹಾಜರಿಪಡಿಸಲಾಗಿದೆಯೋ ಇಲ್ಲವೋ ಗೊತ್ತಿಲ್ಲ ಹೀಗಾಗಿ ಹಾಜರು ಪಡಿಸಲು ಆಗುತ್ತದೋ ಗೊತ್ತಿಲ್ಲ. ನಿ.ಪಿ-6 ರಲ್ಲಿ ಇರುವ ಬರೆದ ಇರುವ ವಿಷಯ ಸರಿ ಇದೆ. ಸದರಿ ದಾಖಲೆಯಲ್ಲಿ ಕಾರಿನಿಂದ ಅಪಘಾತವಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಗೊತ್ತಿಲ್ಲ.

18. ನಿ ಪಿ 5 ರಲ್ಲಿ ವಾಹನಕ್ಕೆ ಯಾವುದೇ ಜಖಂವಾಗಿರುವುದಿಲ್ಲ ಎಂದರೆ ಸರಿ. ಲಾರಿ ಸಂಖ್ಯೆ ಟಿ ಎನ್ 28 ಎಆರ್ 9579 ವಾಹನದಿಂದ ನನಗೆ ಅಪಘಾತವಾಗಿರವುದಿಲ್ಲ ಬೇರೊಂದು ವಾಹನದಿಂದ ಅಪಘಾತವಾಗಿರುತ್ತೆದೆ. ಅಪಘಾತ ವೇಳೆಯಲ್ಲಿ ವಾಹನಕ್ಕೆ ಯಾವುದೇ ಪರಮಿರ್ ಹಾಗೂ ವಾಹನ ಚಾಲಕನಿಗೆ ಡಿ ಎಲ್ ಇರಲಿಲ್ಲ ಹೀಗಾಗಿ 2 ನೇ ಪರಿಹಾರಕ್ಕೆ ಬಾಂಧ್ಯಸ್ಥರಲ್ಲ ಎಂದರೆ ಸರಿಯಲ್ಲ. ವೈದ್ಯನನ್ನು ವಿಚಾರಣೆ ಮಾಡಲು ಯಾವುದೇ ತೊಂದರೆ ಇಲ್ಲ. ಅಪಘಾತ ನನ್ನ ಅಜಾಗೂರುಕತೆಯಿಂದ ಆಗಿದ್ದು. ಲಾರಿ ಚಾಲಕನ ತಪ್ಪಿನಿಂದ ಆಗಿಲ್ಲ ಹೀಗಾಗಿ 2 ನೇ ಎದುರುದಾರರು ಪರಿಹಾರ ಕೊಳ್ಳಲು ಬಾಂಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ